◆ 'ಇಲ್ಲಿ' ಅಂದರೆ?

ಈ ಜಗತ್ತಿನಲ್ಲಿ. ಸಹಿಸಲಾಗದ ಕೌರ್ಯ, ಗೊತ್ತಿದ್ದೂ ಗೊತ್ತಿಲ್ಲದಂತಿರುವುದು, ಜನರ ಹಸಿವಿನ ನೋವು ಇವುಗಳನ್ನು ನಿರ್ಲಕ್ಷಿಸಿ ಇರುವುದು ನನ್ನಿಂದಾಗುವುದಿಲ್ಲ. ಇವುಗಳ ಕುರಿತು ಸದಾ ಎಚ್ಚರದಿಂದಲೇ ಇರುತ್ತೇನೆ. ಬೋಧಕ ವೃತ್ತಿ ಸಂತೃಪ್ತಿ ತರಬಹುದು ಆದರೆ ಪರಿಹಾರವನ್ನಲ್ಲ. ನಾನು ಈ ಜಗತ್ತಿಗೆ ಸೇರಿದವಳು ಅನ್ನಿಸುವುದು ನಾನು ಬರೆದಾಗ ಮಾತ್ರ. ಶಿಕ್ಷಕಿಯಾಗಿ, ತಾಯಿಯಾಗಿ, ಪ್ರೇಮಿಯಾಗಿ ಇದ್ದಾಗ ಹಾಗನ್ನಿಸುವುದಿಲ್ಲ. ಕೃತಿಯ ಮೂಲಕ ಹೋರಾಡುವುದು ನನಗೆ ಅದನ್ನು ಪ್ರಕಟಿಸುವುದಕ್ಕಿಂತ ಮುಖ್ಯ.

◆ ನೀವಿದನ್ನು ಮಾಡದೇ ಇದ್ದಿದ್ದರೆ?

ಆ ಅವ್ಯವಸ್ಥೆಯ ಭಾಗವಾಗಿರುತ್ತಿದ್ದೆ.

◆ ನೀವು ಲೇಖಕಿಯಾಗಬಲ್ಲಿರಿ ಎಂದು ಯಾವಾಗ ಅನ್ನಿಸಿತು?

ಬಹಳ ತಡವಾಗಿ. ಬರವಣಿಗೆಯಲ್ಲಿ ಪ್ರವೀಣೆ ಅನ್ನಿಸುತ್ತಿತ್ತು. ಜನ ಕೂಡ ಅದನ್ನೇ ಹೇಳುತ್ತಿದ್ದರು. ಆದರೆ, ಅವರ ನನ್ನ ಮಾನದಂಡಗಳು ಭಿನ್ನವಾಗಿದ್ದರಿಂದ ಅವರ ಮಾತುಗಳ ಕುರಿತು ನನಗೆ ಆಸಕ್ತಿಯಿರಲಿಲ್ಲ. ನನ್ನ ಮೂರನೆಯ ಪುಸ್ತಕ 'Song of Solomon' ಬರೆಯುವಾಗ ಬರವಣಿಗೆ ನನ್ನ ಬದುಕಿನ ಮುಖ್ಯ ಅಂಗ ಅನ್ನಿಸಿತು. ಮಹಿಳೆಯಾಗಿ ನಾನು ಲೇಖಕಿ ಎಂದು ಹೇಳಿಕೊಳ್ಳುವುದು ಕಷ್ಟ.

◆ ಯಾಕೆ?

ಈಗದು ಕಷ್ಟವಿಲ್ಲ. ಆದರೆ, ನನ್ನ ಕಾಲದ, ವರ್ಗದ ಅಥವ ವರ್ಣದವರಿಗೆ ಅದು ಕಷ್ಟವಿತ್ತು. ಲೇಖಕಿ ಅಂದಾಕ್ಷಣ ನೀವು ನಿಮ್ಮ ಲಿಂಗಾಧಾರಿತ ಪಾತ್ರದಿಂದ ಹೊರಬರುತ್ತೀರಿ. ನಾನು ತಾಯಿ, ಹೆಂಡತಿ ಇಲ್ಲವೆ ಶಿಕ್ಷಕಿ, ಸಂಪಾದಕಿ ಅಂತೆಲ್ಲ ಹೇಳುತ್ತಿಲ್ಲ. ನೀವು ಲೇಖಕಿ ಅಂದಾಕ್ಷಣ ಅದರರ್ಥವೇನು? ಅದು ವೃತ್ತಿಯೇ? ಅದರ ಮೂಲಕ ನಿಮ್ಮ ಅನ್ನವನ್ನು ಸಂಪಾದಿಸಿಕೊಳ್ಳಬಲ್ಲಿರಾ?

ಅದು ಅಪರಿಚಿತ ಲೋಕ. ಅಲ್ಲಿ ನಿಮ್ಮದೆನ್ನುವ ನೆಲೆಯಿಲ್ಲ. ಆ ಸಮಯದಲ್ಲಿ ಯಾವುದೇ ಯಶಸ್ವಿ ಲೇಖಕಿಯರು ನನಗೆ ವೈಯಕ್ತಿಕವಾಗಿ ಪರಿಚಯವಿರಲಿಲ್ಲ. ಅಲ್ಲಿ ಪುರುಷರದೇ ಆಧಿಪತ್ಯವಿತ್ತು. ಅಂತಹ ಕಡೆ ನೀವು ಅಂಚಿಗೆ ಸೇರಿದ ವ್ಯಕ್ತಿಯಾಗಿ ಬಿಡುತ್ತೀರಿ. ಎಷ್ಟರಮಟ್ಟಿಗೆ ಎಂದರೆ ನೀವು ಬರೆಯಲು ಅನುಮತಿ ಪಡೆಯಬೇಕಾಗುತ್ತದೆ. ಮಹಿಳೆಯರ ಆತ್ಮಕತೆಗಳು, ಜೀವನ ಚರಿತ್ರೆಗಳನ್ನು ಓದಿದಾಗ ಸರಿಸುಮಾರು ಎಲ್ಲರೂ ಬರೆಯಲು ಯಾರೋ ಒಬ್ಬರು ತಮಗೆ ಬರೆಯಲು ಹೇಳಿದರು ಎನ್ನುವ ಮಾತನ್ನು ಉಲ್ಲೇಖಿಸಿರುತ್ತಾರೆ. ತಾಯಿಯೋ, ಗಂಡನೋ, ಶಿಕ್ಷಕರೋ ಹೀಗೆ ಯಾರಾದರೊಬ್ಬರು ನೀನು ಬರೆಯಬಲ್ಲೆ ಬರಿ ಅಂದಿರುತ್ತಾರೆ. ಗಂಡಸಿಗೆ ಈ ಮಾತಿನ ಅವಶ್ಯಕತೆಯಿಲ್ಲ ಅಂತಲ್ಲ. ಚಿಕ್ಕವರಿದ್ದಾಗಲೇ ಅವರಿಗೂ ಯಾರೋ ಹೀಗೆ ಹುರಿದುಂಬಿಸಿರುತ್ತಾರೆ. ಅವರು ತಕ್ಷಣ ಮುಂದುವರೆದು ಬಿಡುತ್ತಾರೆ. ಅವರಿಗದು ಅಷ್ಟು ಮಹತ್ವದ ವಿಷಯವಾಗುವುದಿಲ್ಲ. ನನ್ನಿಂದ ಅದು ಸಾಧ್ಯವಿರಲಿಲ್ಲ. ಬರವಣಿಗೆ ನನ್ನ ಬದುಕಿನ ಮಹತ್ವದ ಅಂಗ ಅಂತ ಅರಿವಾಗಿದ್ದರೂ, ಅದರಿಂದ ಖುಷಿ ದೊರಕಿದ್ದರೂ ಅದನ್ನು ಹೇಳಲು ನಂಗೆ ಸಾಧ್ಯವಿರಲಿಲ್ಲ. ಏನು ಮಾಡುತ್ತಿದ್ದೀಯಾ ಅಂತ ಯಾರಾದರೂ ಕೇಳಿದಾಗ ಸಂಪಾದಕಿ ಅಂತಲೋ ಶಿಕ್ಷಕಿ ಅಂತಲೋ ಹೇಳುತ್ತಿದ್ದೆ ಹೊರತು ಲೇಖಕಿ ಅಂತ ಹೇಳುತ್ತಿರಲಿಲ್ಲ.